# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

**ಸಿ ಸಿ ನಂಃ258/2017**

**ಚಾಸಾ-4/ಪ್ರಾಸಾ-5**

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.** **ದಿನಾಂಕಃ03.12.2025**

ಹೆಸರು : ಕೆ ಎಸ್ ಕುಮಾರ್ ತಂದೆ ಕೌಳಪ್ಪ

ವಯಸ್ಸು : **48** ವರ್ಷ

ಉದ್ಯೋಗ : ವ್ಯವಸಾಯ

ವಿಳಾಸ : ಮಲೆಮಾಚಿಕೆರೆ ಗ್ರಾಮ, ಜಗಳೂರು

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ನನಗೆ ಈ ಪ್ರಕರಣದ ಆರೋಪಿಗಳು ಪರಿಚಯ ಇರುವುದಿಲ್ಲ . ಸಾಕ್ಷಿಗೆ ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಸದರಿ ದಾಖಲೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆಯು ಪಂಚನಾಮೆ ಆಗಿದ್ದು ಅದನ್ನು ನಿಪಿ 6 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 6 (ಎ) ಎಂದು ಗುರುತಿಸಲಾಯಿತು. ಈ ಸುಮಾರು 6-7 ವರ್ಷಗಳ ಹಿಂದೆ ಸಹಿ ಮಾಡಿರುತ್ತೇನೆ . ಸದರಿ ಸಹಿಯನ್ನು ಸತೀಶ್ ಗೌಡ ರವರ ಹೋಲದ ಬಳಿ ಮಾಡಿರುತ್ತೇನೆ . ಕಳ್ಳತನ ವಿಚಾರವಾಗಿ ಸಹಿ ಮಾಡಿರುತ್ತೇನೆ . ಕಳ್ಳತನವಾದ ಜಾಗವನ್ನು ಯಾರು ತೋರಿಸಿರುತ್ತಾರೆ ನನಗೆ ಗೊತ್ತಿರುವುದಿಲ್ಲ . ನನ್ನ ಜೋತೆ ಚಾಸಾ-5 ರವರು ಸಹಿ ಮಾಡಿರುತ್ತಾರೆ . ಸಾಕ್ಷಿಗೆ ಕಡತದಲ್ಲಿರುವ 4 ಪೋಟೋಗಳನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿ ತಾನು ಇದ್ದ ಬಗ್ಗೆ ಒಪ್ಪಿಕೊಂಡಿದ್ದು, ಅದನ್ನು ನಿಪಿ 7 ಮತ್ತು 8 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಎರಡು ಪೋಟೋಗಳನ್ನು ತೋರಿಸಿದ್ದು , ಸದರಿ ಪೋಟೋಗಳನ್ನು ನಮ್ಮ ಗ್ರಾಮದ ಬಸವೇಶ್ವರ ದೇವಸ್ಥಾನದಲ್ಲಿ ತಗೆದಿರುವುದಾಗಿ ಗುರುತಿಸಿರುತ್ತಾರೆ . ಅವುಗಳನ್ನು ಕ್ರಮವಾಗಿ ನಿಪಿ 9 ಮತ್ತು 10 ಎಂದು ಗುರುತಿಸಲಾಯಿತು. ಮಹಜರ್ ಕ್ರಮ ಜರುಗಿಸುವಾಗ

5-6 ಜನ ಇದ್ದರು . ಸದರಿ 5-6 ಜನ ನ್ಯಾಯಾಲಯದಲ್ಲಿ ಈಗ ಹಾಜರು ಇರುವುದಿಲ್ಲ . ಬಹಳ ಜನ ಇದ್ದ ಕಾರಣ ಗುರುತು ಹಿಡಿಯಲು ಆಗುವುದಿಲ್ಲ ಎಂದು ಹೇಳುತ್ತಾರೆ .

**(**ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸದರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಸೂಕ್ತ ಕಾರಣಗಳನ್ನು ನೀಡಿದ ಮೇರೆಗೆ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು**).**

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ದಿಃ **02.09.2016** ರಲ್ಲಿ ನಿಪಿ **6** ದಾಖಲೆಗೆ ನನ್ನ ಸಹಿಯನ್ನು ಮಾಡಿರುತ್ತೇನೆ ಎಂದರೆ ಸರಿ . ಆರೋಪಿ 1 ರವರು ಕಳ್ಳತನವಾದ ಜಾಗಗಳನ್ನು ನಮಗೆ ತೋರಿಸುತ್ತಾರೆ ಎಂದರೆ ಸರಿಯಲ್ಲ. ಆರೋಪಿ 1 ರವರು ಜೊತೆ ಆರೋಪಿ 2 ರಿಂದ 4 ರವರು ಮತ್ತು ಚಾಸಾ-1 ರವರು ಹಾಜರು ಇದ್ದರು ಎಂದರೆ ಸರಿಯಲ್ಲ. ಈ ವಿಚಾರವಾಗಿ ಪೋಲೀಸರು ನಿಪಿ **7** ರಿಂದ **10** ತಗೆದಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಗಳು ಈ ಪ್ರಕರಣ ಆರೋಪಗಳು ಎಂದರೆ ಸರಿಯಲ್ಲ.

**ಪಾಟೀ ಸವಾಲುಃ-ಆರೋಪಿ ಪರ ವಕೀಲರಿಂದಃ** ಏನು ಇರುವುದಿಲ್ಲ **.**

**ಮರು ವಿಚಾರಣೆಃ ಇರುವುದಿಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ**.)**

**ಓ ಹೇ ಕೇ ಸರಿ ಇದೆ**

**Sd/-**

**ಪ್ರ.ದ.ನ್ಯಾ.ದಂ., ಜಗಳೂರು**